ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ        ದಿನಾಂಕ : DATE : 17/03/2020

# ಯತ್ನಾಳ ಸಾಬೀತುಪಡಿಸಿದರೆ ರಾಜಕೀಯ ನಿವೃತ್ತಿ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ 17-3-20

ಬೆಂಗಳೂರು: 'ಎಚ್‌.ಡಿ.ದೇವೇಗೌಡರು ಸಾವಿರಾರು ಕೋಟಿ ಆಸ್ತಿ ಮಾಡಿದ್ದಾರೆ ಎಂದು ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಹೇಳಿದ್ದಾರೆ. ಅದನ್ನು ಅವರು ಸಾಬೀತುಪಡಿಸಿದರೆ ಆ ಕ್ಷಣವೇ ರಾಜಕೀಯದಿಂದ ನಿವೃತ್ತಿಯಾಗುತ್ತೇನೆ' ಎಂದು ಜೆಡಿಎಸ್‌ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಸವಾಲು ಎಸೆದರು.

ವಿಧಾನಸಭೆಯಲ್ಲಿ ಸೋಮವಾರ ಸಂವಿಧಾನದ ಮೇಲಿನ ಚರ್ಚೆ ವೇಳೆ, 'ಚುನಾವಣೆ ವೇಳೆಯಲ್ಲಿ ದೇವೇಗೌಡರು ರಾಜಾಜಿನಗರದ ಬಡ್ಡಿ ಜನ್ನಪ್ಪ ಅವರಿಗೆ ಚೆಕ್‌ ನೀಡಿ ₹5 ಲಕ್ಷ ಸಾಲ ತಂದಿದ್ದರು. ಆ ಹಣವನ್ನು ಅಭ್ಯರ್ಥಿಗಳ ಚುನಾವಣಾ ಖರ್ಚಿಗೆ ಬಳಸಿದ್ದರು. ಸಾವಿರಾರು ಕೋಟಿ ಮಾಡಿದ್ದರೆ ಸಾಲ ತರುವ ಅಗತ್ಯ ಇತ್ತೇ' ಎಂದು ಪ್ರಶ್ನಿಸಿದರು.

'ಆಯಕಟ್ಟಿನ ಹುದ್ದೆಗಳಿಗೆ ವರ್ಗಾವಣೆ ಮಾಡಿಕೊಡುವಂತೆ ಕೆಲವರು ನನ್ನ ಬಳಿ ಬಂದಿದ್ದರು. ಅವರನ್ನು ನಾನು ದೂರ ಇಟ್ಟಿದ್ದೆ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ 24 ಗಂಟೆಗಳಲ್ಲೇ ಅವರಿಗೆ ಆಯಕಟ್ಟಿನ ಹುದ್ದೆಗಳನ್ನು ನೀಡಲಾಗಿದೆ' ಎಂದು ದೂರಿದರು.

'ನಾವೆಲ್ಲ ಹೇಳುವುದು ಆಚಾರ. ತಿನ್ನುವುದು ಬದನೆಕಾಯಿ. ಚುನಾವಣೆ ಹೇಗೆ ನಡೆಯುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಪ್ರೋಸ್ಸರ್‌, ಹ್ಯಾಂಡ್‌ಬಿಲ್‌ ಕೊಟ್ಟರೆ ಬದಿಗಿಡಣ್ಣ ಎಂದು ಕಾರ್ಯಕರ್ತರು ಹೇಳುತ್ತಾರೆ. ಜೊತೆಗೆ ಎಷ್ಟು ಹಣ ಕಳುಹಿಸಿದಿಯಣ್ಣ ಎಂದೂ ಪ್ರಶ್ನೆ ಮಾಡುತ್ತಾರೆ. ಹೀಗಿದೆ ನಮ್ಮ ಸ್ಥಿತಿ' ಎಂದರು.

'2011ನೇ ಸಾಲಿನ ಗೆಜೆಟೆಡ್‌ ಪ್ರೊಬೆಷನರಿ ಹುದ್ದೆಯ ನೇಮಕಾತಿಯನ್ನು ತಡೆಹಿಡಿದಿದ್ದು ಯಾಕೆ. ಆ ಬ್ಯಾಚ್‌ನವರು ಮಾತ್ರ ಅಕ್ರಮ ಮಾಡಿದ್ದಾರೆಯೇ. ಉಳಿದೆಲ್ಲ ನೇಮಕಾತಿಗಳೆಲ್ಲ ಪರಿಶುದ್ಧವಾಗಿ ನಡೆಯುತ್ತಿದೆಯೇ' ಎಂದು ಅವರು ಪ್ರಶ್ನಿಸಿದರು.